ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/134/ಇಸಿಎಸ್(3)/2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 25.09.2018.

**ಸುತ್ತೋಲೆ**

ವಿಷಯ : ಡಿಪ್ಲೊಮಾ 2009 ರ ಪಠ್ಯಕ್ರಮದ (ಸಿ-09) ವಿವಿಧ ವಿಭಾಗಗಳಲ್ಲಿ 05 ನೇ ಸೆಮಿಸ್ಟರ್ ವ್ಯಾಸಂಗ ಮುಗಿಸಿರುವ ವಿದ್ಯಾರ್ಥಿಗಳಿಗೆ CASP LAB ಪ್ರಾಯೋಗಿಕ ವಿಷಯದಲ್ಲಿ ಆಂತರಿಕ ಅಂಕಗಳ ಸುಧಾರಣೆಗೆ (IA Improvement) ಅವಕಾಶ ಕಲ್ಪಿಸುವಬಗ್ಗೆ.

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ: ಇಡಿ 116 ಟಿಪಿಇ 2018, ದಿನಾಂಕ: 06.09.2018.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಸರ್ಕಾರದ ಪತ್ರದಲ್ಲಿ **ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಸಿ-09 ಪಠ್ಯಕ್ರಮದಡಿಯಲ್ಲಿ 2009-10ನೇ ಸಾಲಿನಿಂದ ಪ್ರವೇಶಾತಿಯನ್ನು ಪಡೆದು CASP LAB (COMMUNICATION AND ANALYSIS SKILL DEVELOPMENT PROGRAMME) ಪ್ರಾಯೋಗಿಕ ವಿಷಯದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇವರುಗಳಿಗೆ ಸದರಿ ಪ್ರಾಯೋಗಿಕ ವಿಷಯದಲ್ಲಿ ವಿಶೇಷ ಪ್ರಾಯೋಗಿಕ ತರಬೇತಿಗಳನ್ನು ನಡೆಸಿ ಅರ್ಹತೆ ಹೊಂದಿದ ವಿದ್ಯಾರ್ಥಿಗಳಿಗೆ 2018ರ ನವೆಂಬರ್/ಡಿಸಂಬರ್ ಹಾಗೂ 2019 ರ ಏಪ್ರಿಲ್/ಮೇ ಪರೀಕ್ಷೆಗಳಲ್ಲಿ ಅಂಕಗಳ ಸುಧಾರಣೆಗೆ ಅವಕಾಶ ಕಲ್ಪಿಸಲು ಹಾಗೂ CASP LAB ವಿಷಯದಲ್ಲಿ ಒಟ್ಟು 60 ಅಂಕ ಮತ್ತು 60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಉತ್ತೀರ್ಣ ಎಂದು ಘೋಷಿಸಲು ಸರ್ಕಾರವು ಅನುಮತಿ ನೀಡಿರುತ್ತದೆ.** ಪ್ರಯುಕ್ತ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ ಹಾಗೂ ಸದರಿ ವಿಷಯವನ್ನು ಸಂಬಂಧಪಟ್ಟ ಉಪನ್ಯಾಸಕರುಗಳು/ವಿದ್ಯಾರ್ಥಿಗಳು/ಪೋಷಕರ ಗಮನಕ್ಕೆ ತರಲು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ : ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ :

1. ಇ-ಆಡಳಿತ - ಅಂತರ್ಜಾಲದಲ್ಲಿ ಪ್ರಕಟಿಸಲು.
2. ನಿರ್ದೇಶಕರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಕಾರ್ಯದರ್ಶಿಯವರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ಗಣಕ ಕೇಂದ್ರ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು - ಬಿ.ಟಿ.ಇ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು.